Rotary

# JASMINE

ಜಾಸ್ಮಿನ್ जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 13 | 26th September 2024

## ಕುಟುಂಬ ಸಮ್ಮಿಲನ

## ಸದಸ್ಯರಿಂದ ಪ್ರತಿಭಾ ಪ್ರದರ್ಶನ

ಪ್ರಾಯೋಜಕರು :

ರೊ. ಅರುಣ್ ಮೆಂಡೋನ್ಸ

ರೊ.ಕೆ ಕೆ ಕಾಂಚನ್, ರೊ. ರಾಘವೇಂದ್ರ ಶೇಟ್

Time : 7.00 p.m.

Venue : Akshatha Sabhabhavana, Hotel Hariprasad



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

**39th year of Service and Fellowship**

# ವಾರದ ಸಭೆಯ ವರದಿ




ಕಳೆದ ವಾರದ ಸಭೆಯು ತಾ. 19ರಂದು ಹೋಟೆಲ್ ಶಿವಪ್ರಸಾದ್‌ನ ಸಭಾಂಗಣದಲ್ಲಿ ನಡೆಸಲಾಯಿತು. ರೊ. ಶ್ರೀನಿವಾಸ್ ಶೇಟ್‌ರವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮುಖ್ಯ ಅತಿಥಿಗಳಾಗಿ ನಮ್ಮ ಸಭೆಗೆ ಕುಂದಾಪುರದ ಮಾತಾ ಆಸ್ಪತ್ರೆಯ ಪ್ರಖ್ಯಾತ ಮನೋವೈದ್ಯರಾದ ಡಾ. ಪ್ರಕಾಶ್ ತೋಳಾರ್‌ರವರು ಆಗಮಿಸಿದ್ದರು. ಅತಿಥಿಗಳನ್ನು, ಆಗಮಿಸಿದ ಸದಸ್ಯರನ್ನು, ಇನ್ನರ್‌ವೀಲ್ ಸದಸ್ಯೆಯರನ್ನು ಹಾಗೂ ಆರ್‌ಸಿಸಿ ಸದಸ್ಯರನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ಹಂಗಾಮಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ರೊ. ಸುರೇಖ ಪುರಾಣಿಕ್‌ರವರು ಕಳೆದ ವಾರದ ವರದಿಯನ್ನು ಸಭೆಗೆ ತಿಳಿಸಿದರು. ವಾರದ ಚಿಂತನೆಯನ್ನು ನೀಡಿದ ರೊ. ದೋಮ ಚಂದ್ರಶೇಖರ್‌ರವರು "ರೋಟರಿಯಲ್ಲಿರುವ ಮೂಲ ಉದ್ದೇಶದಂತೆ ಸದಸ್ಯರು ಯಾವಾಗಲೂ ಜಾತಿ, ಮತ, ಧರ್ಮ, ಬಣ್ಣ, ಶ್ರೀಮಂತಿಕೆಯ ಭೇದವನ್ನು ಬಯಸದೇ ಶುದ್ಧ ಸ್ನೇಹತ್ವಕ್ಕೆ ಮಾತ್ರ ಬೆಲೆ ನೀಡಬೇಕು." ಎನ್ನುವ ಕಾಳಜಿಯನ್ನು ವ್ಯಕ್ತಪಡಿಸಿದರು. ರೋಟರಿ ಮಾಹಿತಿ ನೀಡಿದ ರೊ. ವಾಸುದೇವ ಕಾರಂತರು "ರೋಟರಿಯು ನೂರು ವರ್ಷಗಳ ಹಿಂದೆಯೇ ತನ್ನದೇ ಆದ ಒಂದು "ಸಂವಿಧಾನ"(MOP) ವನ್ನು ರಚಿಸಿಕೊಂಡು ಪ್ರತೀ ಮೂರು ವರ್ಷಗಳಿಗೆ ಅಂದಿನ ಅಗತ್ಯತೆಗಳಿಗೆ ಅನುಸಾರವಾಗಿ ಮಾರ್ಪಾಡುಗಳನ್ನು ಮಾಡುತ್ತಿರುವುದರಿಂದ ಇಂದಿಗೂ ಪ್ರಪಂಚದಲ್ಲಿ ರೋಟರಿಯು ಸಾಂಗವಾಗಿ ನಡೆಯುತ್ತಿದೆ" ಎಂದರು. ಮುಖ್ಯ ಅತಿಥಿಗಳನ್ನು ಅವರ ಕುಟುಂಬ ಸದಸ್ಯರಾದ ರೊ. ಕೆ. ಕೆ. ಕಾಂಚನ್‌ರವರು ಸಭೆಗೆ ಪರಿಚಯಿಸಿದರು.

"ಮಾನಸಿಕ ಆರೋಗ್ಯ"ದ ಬಗ್ಗೆ ಮಾತನಾಡಿದ ಡಾ. ಪ್ರಕಾಶ್ ತೋಳಾರ್‌ರವರು "ರೋಟರಿಯು ಇಂದು ತನ್ನದೇ ಆದ ಸಂವಿಧಾನ ನಿಯಂತ್ರಣದಲ್ಲಿ ನಡೆಯುತ್ತಿರುವುದರಿಂದ ಇಂದಿಗೂ ಅದು ಪ್ರಪಂಚದಲ್ಲಿ ತನ್ನದೇ ಆದ ಗೌರವವನ್ನು ಇಮ್ಮಡಿಗೊಳಿಸಿ, ಯಶಸ್ಸಿನ ಕಡೆಗೆ ಧಾವಿಸುತ್ತಿದೆ. ಅದೇ ರೀತಿ ಮಾನವನ ದೇಹವು ಕೂಡಾ ಮೆದುಳಿನ ನಿಯಂತ್ರಣದಲ್ಲಿ ನಡೆಯುತ್ತಿರುವುದರಿಂದ ಮಾನಸಿಕ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ಪ್ರತಿಯೊಬ್ಬರೂ ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯ" ಎಂದರು. ಇಂದು ಪ್ರತಿಯೊಬ್ಬರಲ್ಲಿ ಬೇರೆ ಬೇರೆ ರೀತಿಯ ಮಾನಸಿಕ ಆತಂಕಗಳು, ಖಿನ್ನತೆಗಳು, ಸಂಶಯ ಪ್ರವೃತ್ತಿಗಳು, ಗೀಳುರೋಗ ಮತ್ತು ಉನ್ಮಾದಗಳಂತಹ ತರಹೇವಾರು ಮನೋವಿಕಾರಗಳು ಹೆಚ್ಚಾಗಲಿದ್ದು, ಸಮಾಜದಲ್ಲಿ ಮೇಲ್ವರ್ಗದ ಜನರು ಹಾಗೂ ವಿದ್ಯಾವಂತರೂ ಇದರಿಂದ ಹೊರತಾಗಿಲ್ಲ. ಪ್ರಥಮಾರ್ಧದಲ್ಲೆ ಇದನ್ನು ಗುರುತಿಸಿಕೊಳ್ಳದೇ ಹೋದಲ್ಲಿ ಮುಂದೆ ಆತ್ಮಹತ್ಯೆಯಂತಹ ದುರಂತಗಳಲ್ಲಿ ಇದು ಕೊನೆಗೊಳ್ಳುವಾಗ ಕುಟುಂಬ ಸದಸ್ಯರು ಕೈ ಹೊಸಕಿಕೊಳ್ಳುತ್ತಾರೆ. ಭಾರತದಲ್ಲಿ ಇಂದು ಆತ್ಮಹತ್ಯೆಗಳ ಸಂಖ್ಯೆ ಪ್ರತೀ ವರ್ಷ ಜಾಸ್ತಿಯಾಗುತ್ತಿದೆ. ಇದು ಮಾನಸಿಕ ಒತ್ತಡದ ಪರಿಣಾಮದಿಂದಾಗಿ ದೇಹದಲ್ಲಿರುವ ಹಾರ್ಮೋನುಗಳ ವ್ಯತ್ಯಯದಿಂದಾಗಿ ಘಟಿಸುತ್ತದೆ. ಆದರೆ ಕುಟುಂಬ ಸದಸ್ಯರು ಅವರನ್ನು ಸನಿಹದಿಂದ ಗಮನಿಸಿ, ಮನೋವೈದ್ಯರನ್ನು ಸಂಪರ್ಕಿಸಿ ಆಪ್ತ ಸಮಾಲೋಚನೆಯನ್ನು ನಡೆಸಿದ್ದಲ್ಲಿ ಆತ್ಮಹತ್ಯೆಗಳ ಸಂಖ್ಯೆಯನ್ನು ಗಮನಾರ್ಹವಾಗಿ ಇಳಿಸಬಹುದು" ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಮುಖ್ಯವಾಗಿ ಬೆಳಗ್ಗಿನ ಸಮಯದಲ್ಲಿ ಸ್ವಲ್ಪ ಹೊತ್ತು ಧ್ಯಾನ, ಯೋಗ, ನಡಿಗೆ, ಕುಟುಂಬ ಸದಸ್ಯರೊಂದಿಗೆ ಸಾಮರಸ್ಯದ ಜೀವನ, ಸದಾ ನಗುಮುಖದೊಂದಿಗೆ ಆರೋಗ್ಯಕರವಾದ ಆಹಾರವನ್ನು ಹಿತಮಿತವಾಗಿ ಸೇವಿಸಿದಲ್ಲಿ ದೇಹದ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ಸಾಧ್ಯವೆನ್ನುವ ಹಿತವಚನಗಳನ್ನು ನೀಡಿದರು.




ಸೆಪ್ಟೆಂಬರ್ 15 ತಾರೀಕು ಶ್ರೀ ಎಂ. ವಿ. ವಿಶ್ವೇಶ್ವರಯ್ಯರವರ ಜನ್ಮದಿನವಾಗಿರುವುದರಿಂದ ಇಡೀ ಭಾರತದಲ್ಲಿ ಆ ದಿನವನ್ನು Engineers Dayಯಾಗಿ ಆಚರಿಸುತ್ತಿರುವುದರಿಂದ ನಮ್ಮ ಕ್ಲಬ್ಬಿನ ಕ್ರಿಯಾಶೀಲ ಸದಸ್ಯರಾಗಿರುವ ನಿವೃತ್ತ ಇಂಜಿನಿಯರ್ ರೊ. ಸತ್ಯನಾರಾಯಣ ಪುರಾಣಿಕ್‌ರವರನ್ನು ನಮ್ಮ ಕ್ಲಬ್ಬಿನ ಎಲ್ಲಾ ಸದಸ್ಯರ ಸಮ್ಮುಖದಲ್ಲಿ ಶಾಲು ಹೊದಿಸಿ ಸನ್ಮಾನಿಸಲಾಯಿತು. ನಂತರ ಮಾತನಾಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು "ಮಹಿಳೆಯರಿಗೆ ಬರೇ ಕ್ಯಾನ್ಸರ್ ತಪಾಸಣೆಯನ್ನು ನಡೆಸಲು ಸುಮಾರು 8 ಸಾವಿರದಷ್ಟು ದುಬಾರಿ ಶುಲ್ಕವನ್ನು ಮಣಿಪಾಲದಂತಹ ಆಸ್ಪತ್ರೆಗಳಲ್ಲಿ ನೀಡಬೇಕಾಗುವುದರಿಂದ, ಕಳೆದ ವಾರ ನಮ್ಮ ಕ್ಲಬ್ಬಿನ ವತಿಯಿಂದ ಗ್ರಾಮೀಣ ವಲಯದ 57 ಮಹಿಳೆಯರಿಗೆ ಈ ಸೌಲಭ್ಯ ಉಚಿತವಾಗಿ ನೀಡಲು ಸಾಧ್ಯವಾಗಿರುವುದು ತಮಗೆ ತುಂಬಾ ಸಂತೃಪ್ತಿಯನ್ನು ನೀಡಿದೆ." ಎಂದರು.

ತಾ. 22ರಂದು ಶ್ರೀ ಕುಂದೇಶ್ವರ ದೇವಸ್ಥಾನದಲ್ಲಿ ನಡೆಯುವ ವಿಶ್ವಯೋಗ ದಿನದ ಪೂರ್ವಭಾವಿ ಸಭೆಗೆ ಎಲ್ಲರ ಸಹಕಾರವನ್ನು ಕೋರಿದರು. ಇನ್ನರ್‌ವೀಲ್ ಅಧ್ಯಕ್ಷೆ ರೊ. ಸುರೇಖ ಪುರಾಣಿಕ್‌ರವರು ಒಂದು ಪ್ರಕಟಣೆಯನ್ನು ನೀಡುತ್ತಾ "ತಾ. 25ರಂದು ನಮ್ಮ ಇನ್ನರ್‌ವೀಲ್ ಕ್ಲಬ್‌ಗೆ Dist. Chairman ಆಗಿರುವ ಶ್ರೀಮತಿ ವೈಶಾಲಿ ಕುಡ್ವರವರು ಆಗಮಿಸುತ್ತಿರುವುದರಿಂದ ಎಲ್ಲಾ ರೋಟರಿ ಸದಸ್ಯರು ಕೂಡಾ ತಮ್ಮ ಈ ಸಂಭ್ರಮದಲ್ಲಿ ಭಾಗಿಯಾಗಬೇಕು" ಎಂದು ಕೋರಿದರು. ರೊ. ಜೆರಾಲ್ಡ್ ಕ್ರಾಸ್ಟೋರವರು ನಗೆಹನಿಯ ಮೂಲಕ ಎಲ್ಲರಲ್ಲೂ ಮಂದಹಾಸ ಮೂಡಿಸಿದರು. ರೊ. ಸುರೇಖ ಪುರಾಣಿಕ್‌ರವರು ಲಕ್ಕಿ ರೊಟೇರಿಯನ್ ಆಗಿ ಆಯ್ಕೆಯಾದರು. ಹಿರಿಯ ಸದಸ್ಯರಾಗಿರುವ ಹಾಗೂ ಅತಿಥಿ ಡಾ. ಪ್ರಕಾಶ್ ತೋಳಾರ್‌ರವರ ಅಭಿಮಾನಿಯಾಗಿರುವ ರೊ. ಕೆ. ಟಿ. ಸುರೇಂದ್ರನಾಥ್‌ರವರು ಅತಿಥಿಗಳಿಗೆ ಹಾಗೂ ಉಪಸ್ಥಿತಿಯಲ್ಲಿರುವ ಎಲ್ಲರಿಗೂ ಧನ್ಯವಾದ ನೀಡಿದರು. ರಾಷ್ಟ್ರಗೀತೆಯ ನಂತರ ಸಭೆಯನ್ನು ಮುಂದಿನ ವಾರಕ್ಕೆ ವಿಸ್ತರಿಸಲಾಯಿತು.




## ವಿಶ್ವಯೋಗ ಸಮ್ಮೇಳನ – 2024ರ ಪೂರ್ವಭಾವಿ ಸಮ್ಮಿಲನ









ತಾ. 22ರಂದು ಶ್ರೀ ಕುಂದೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಮತ್ತು ಶ್ರೀ ಪತಂಜಲಿ ಯೋಗ ಸಮಿತಿ, ಕುಂದಾಪುರದವರೊಂದಿಗೆ ವಿಶ್ವಯೋಗ ಸಮ್ಮೇಳನ – 2024ರ ಪೂರ್ವಭಾವಿ ಸಮ್ಮಿಲನ ಕಾರ್ಯಕ್ರಮವನ್ನು ನಡೆಸಲಾಯಿತು. ಯೋಗವನ್ನು ವಿಶ್ವದೆಲ್ಲೆಡೆ ಪ್ರಸಾರ ಮಾಡುವ ದಿಗ್ಗಜರಾದ ಶ್ರೀ ಡಾ. ಯೋಗಿ ದೇವರಾಜ್ ಮತ್ತು ಡಾ. ರಾಘವೇಂದ್ರ ಪೈಯವರೊಂದಿಗೆ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ನಿಯಮಿತ ಯೋಗಾಭ್ಯಾಸದಿಂದಾಗಿ ದೈಹಿಕ ಮತ್ತು ಮಾನಸಿಕ ಆರೋಗ್ಯದಲ್ಲಿ ಸ್ಥಿರತೆಯನ್ನು ಸಾಧಿಸಬಹುದು. ಸ್ವಸ್ಥ ದೇಹ ಸ್ವಸ್ಥ ಮನಸ್ಸನ್ನು ರೂಪಿಸುತ್ತದೆ. ಸ್ವಸ್ಥ ಮನಸ್ಸುಗಳು ಸ್ವಸ್ಥ ಸಮಾಜವನ್ನು ರೂಪಿಸುತ್ತದೆ. ಆದುದರಿಂದ ಯೋಗಬಂಧುಗಳು ಮತ್ತು ರೊಟೇರಿಯನ್ನರು ಸೇರಿ ಸ್ವಸ್ಥ ಸಮಾಜವನ್ನು ನಿರ್ಮಾಣ ಮಾಡೋಣವೆಂದು ಕರೆ ನೀಡಿದರು. ರೋಟರಿ ಸದಸ್ಯರೊಂದಿಗೆ ಸುಮಾರು 70 ಯೋಗ ಪಟುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕಳೆದ ವಾರದ ಚಿಂತನೆ

ಶುದ್ಧ ಸ್ನೇಹವು ವಯಸ್ಸು, ಹಣ, ಸೌಂದರ್ಯ, ಶ್ರೀಮಂತಿಕೆ, ಹಿರಿಮೆ, ವಿದ್ಯೆ ಇವುಗಳನ್ನು ಎಂದಿಗೂ ಬೇಡುವುದಿಲ್ಲ. ಇದು ಕಾಳಜಿಯುಳ್ಳ ಮನಸ್ಸು ಮತ್ತು ಭಾವನೆಗಳನ್ನು ಯಾವುದೇ ಆಕ್ಷೇಪಣೆಯಿಲ್ಲದೆ ಹಂಚಿಕೊಳ್ಳುವ ಸ್ವೀಕಾರವನ್ನು ಮಾತ್ರ ಬಯಸುತ್ತದೆ.

**ನೀಡಿದವರು : ರೊ. ದೋಮ ಚಂದ್ರಶೇಖರ್**

## Rotary Information

### Manual Of Procedure In Rotary

The Rotary Club's Manual of Procedure ( MOP) is a collection of documents that guides Rotary Clubs and Districts on governance and constitutional matters .

It's Content --The MOP includes the Rotary International and Rotary Foundations Constitutional Documents ,the Rotary strategic plan and the recommended Rotary Club Bylaws .

Frequency of MOP-- MOP is published once in every three years after the Council On Legislation to reflect changes to the constitutional documents.

Availability of MOP --- It can be accessed through My Rotary App.

**by Rtn. Vasudeva Karanth**

